# ವಿಪತ್ತು ನಿರ್ವಹಣೆಯಲ್ಲಿ ಶಿಂದೆ, ಯಾವತ್ತೂ ಮುಂದೆ.

ಶೌರ್ಯ



ನಿಪ್ಪಾಣಿ ತಾಲ್ಲೂಕಿನ ಬೇಡಕಿಹಾಳ ಗ್ರಾಮದ ಬಾಳಾಸಾಬ ಕಲ್ಲಪ್ಪ ಶಿಂದೆ ಇವರು ಸಾಮಾಜಿಕ ಕಳಕಳಿಯುಳ್ಳವರು. ಮಾನವೀಯ ಗುಣ ಹೊಂದಿರುವ ಇವರು ಸಾಮಾಜಿಕ ಸೇವೆಯಲ್ಲಿ ಸದಾ ಮುಂದು. ತನ್ನ ವೃತ್ತಿಯೊಂದಿಗೆ, ಸಮಾಜದ ಸೇವೆಯನ್ನೇ ಪ್ರವೃತ್ತಿಯನ್ನಾಗಿ ರೂಢಿಸಿಕೊಂಡಿರುವ ಇವರು ಬೇಡಕಿಹಾಳ ಗ್ರಾಮದಲ್ಲಿ ಮನೆ ಮಾತು. ಕೇವಲ ಸಾಮಾಜಿಕ ಕಳಕಳಿಯ ಚಟುವಟಿಕೆಗಳು ಮಾತ್ರವಲ್ಲದೇ 'ಶೌರ್ಯ' ಶ್ರೀ ಧರ್ಮಸ್ಥಳ ವಿಪತ್ತು ನಿರ್ವಹಣಾ ಘಟಕ ಸೇರಿದ ನಂತರ ವಿಪತ್ತು ನಿರ್ವಹಣೆಗೂ ಸೈ ಎನಿಸಿಕೊಂಡಿದ್ದಾರೆ.

ಶೌರ್ಯ

ಇವರ ಸುತ್ತಮುತ್ತಲಿನ ಗ್ರಾಮಗಳಲ್ಲಿ ಯಾವುದೇ ಅವಘಡಗಳು ಸಂಭವಿಸಿದರೆ ಅಲ್ಲಿನವರಿಗೆ ಬಾಳಾಸಾಬ ಶಿಂದೆಯವರ ನೆನಪಾಗುತ್ತದೆ. ಶಿಂದೆ ವಿಪತ್ತು ನಿರ್ವಹಣೆಯಲ್ಲಿ ಯಾವತ್ತೂ ಮುಂದಿರುತ್ತಾರೆ.

**ವಿವಿಧ ಸಂಘಟನೆಗಳಲ್ಲಿ ಸಕ್ರೀಯ:**

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ‘ಶೌರ್ಯ’ ಘಟಕ ಬೇಡಕಿಹಾಳ ಇದರ ಘಟಕ ಪ್ರತಿನಿಧಿಯಾಗಿರುವ ಇವರು ನಿಪ್ಪಾಣಿ ತಾಲೂಕು ಸಮಿತಿಯ ಕ್ಯಾಪ್ಟನ್ ಆಗಿಯೂ ಸಕ್ರೀಯವಾಗಿದ್ದಾರೆ.



ಜನಜಾಗೃತಿ ವೇದಿಕೆ ಚಿಕ್ಕೋಡಿ ಜಿಲ್ಲೆಯ ಸದಸ್ಯ , ಪ್ರತಿಷ್ಠಿತ ಶ್ರೀ ಜೊಲ್ಲೆ ಉದ್ಯೋಗ ಸಮೂಹದ ಶ್ರೀ ಜ್ಯೋತಿ ವಿವಿಧ ಉದ್ದೇಶಗಳ ಸಹಕಾರಿ ಸಂಘ ನಿಯಮಿತ ಯಕ್ಸಂಬಾ ತಾಲೂಕು ಚಿಕ್ಕೋಡಿ ಇದರ ಮುಖ್ಯ ಕಚೇರಿಯ ನಿರ್ದೇಶಕ, ಹ್ಯೂಮನ್ ರೈಟ್ಸ್ ಸಂಘಟನೆಯ ಬೆಳಗಾವಿ ಜಿಲ್ಲಾ ಸದಸ್ಯ ಹಾಗೂ ರಾಜ್ಯ ಉಪಾಧ್ಯಕ್ಷರಾಗಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

ಸಾಮಾಜಿಕ ಸೇವೆ :

ಬೇಡಕಿಹಾಳ ಗ್ರಾಮದಲ್ಲಿ ಕಳೆದ 15 ವರ್ಷಗಳಿಂದ ಸುಮಾರು 450 ಕುಟುಂಬಕ್ಕೂ ಹೆಚ್ಚು ರಾಷ್ಟ್ರದ ಉಜ್ವಲ ಯೋಜನೆಯ ಅಡಿಯಲ್ಲಿ ಉಚಿತ ಗ್ಯಾಸ್ ಕೀಟ ಕೊಡಿಸುವುದರಲ್ಲಿ ಮಹತ್ತರ ಪಾತ್ರ ವಹಿಸಿದ್ದಾರೆ. ಸುಮಾರು 70ಕ್ಕೂ ಹೆಚ್ಚು ಜನರಿಗೆ ವೃದ್ಧಾಪ್ಯ , ಅಂಗವಿಕಲ, ವಿಧವಾ ಹಾಗೂ ನಿರಾಧಾರ ಪಿಂಚಣಿ ಮಂಜೂರಾತಿ ಮಾಡಿಸುವಲ್ಲಿ ಸಹಕಾರ ನೀಡಿದ್ದಾರೆ

ಸುಮಾರು 40ಕ್ಕೂ ಹೆಚ್ಚು ಜನರಿಗೆ ಮಾನ್ಯ ಮುಖ್ಯಮಂತ್ರಿಗಳ ಮುಖ್ಯಮಂತ್ರಿ ಪರಿಹಾರ ಯೋಜನೆ ಅಡಿ ಪರಿಹಾರವನ್ನು ಒದಗಿಸಿಕೊಡಲು ಪ್ರಯತ್ನಿಸಿದ್ದಾರೆ. ಸರ್ಕಾರ ಹಾಗೂ ಖಾಸಗಿ ಸಂಘ ಸಂಸ್ಥೆಗಳ ಮುಖಾಂತರ ಬಡ ಜನರಿಗೆ ದೊರೆಯುವ ಆರ್ಥಿಕ ಶೈಕ್ಷಣಿಕ ಆರ್ಥಿಕ ಧನ ಸಹಾಯವನ್ನು ದೊರಕಿಸಲು ಸಹಕಾರ ನೀಡಿರುತ್ತಾರೆ.

ಶೌರ್ಯ ಸಂಘಟನೆಯಲ್ಲಿ ಮುಂಚೂಣಿ ಪಾತ್ರ:

ಶೌರ್ಯ ಶ್ರೀ ಧರ್ಮಸ್ಥಳ ವಿಪತ್ತು ನಿರ್ವಹಣೆಯ ತಾಲ್ಲೂಕು ಸಮಿತಿಯ ಕ್ಯಾಪ್ಟನ್ ಆಗಿರುವ ಇವರು ವಿಪತ್ತು ನಿರ್ವಹಣೆ ಮತ್ತು ಸಾಮಾಜಿಕ ಸೇವೆಯಲ್ಲಿ ಸಕ್ರೀಯರಾಗಿದ್ದಾರೆ.



ಗ್ರಾಮದಲ್ಲಿಯ ವಿವಿಧ ಮಂದಿರಗಳಲ್ಲಿ ಶ್ರಮದಾನ, ಧೂದಗಂಗಾ ಹೊಳೆಯಿಂದ ಪ್ರವಾಹಕ್ಕೆ ಸಿಲುಕುವ ನದಿ ದಡದ ತೋಟಗಳಲ್ಲಿ ಹೋಗಿ ಅಲ್ಲಿರುವ ಕುಟುಂಬಸ್ಥರಿಗೆ ಮುಂಜಾಗ್ರತ ಕ್ರಮಗಳ ಕುರಿತು ಮಾಹಿತಿ ನೀಡುವುದು. ಪ್ರವಾಹ ಪರಿಸ್ಥಿತಿ ನಿರ್ಮಾಣವಾದಾಗ ಅಲ್ಲಿಯ ಕುಟುಂಬಸ್ಥರನ್ನು , ಜಾನುವಾರಗಳನ್ನು ಹಾಗೂ ಮೇವನ್ನು ಸುರಕ್ಷಿತ ಸ್ಥಳಕ್ಕೆ ಒಯ್ಯುವುದು, ದೂದಗಂಗಾ ಹೊಳೆಯ ಪ್ರವಾಹದಿಂದ ಕಾಣೆಯಾದ ವೃದ್ಧ ಶ್ರೀ ಅಪ್ಪಾಸಾಹೇಬ ಸಂಗಾನೆ ಇವರನ್ನು ಜಲಾವೃತವಾದ ಕಬ್ಬಿನ ಗದ್ದೆ , ತೋಟ , ಬಾವಿ ಹಾಗೂ ಬಯಲು ಪ್ರದೇಶಗಳಲ್ಲಿ ಶೋಧ ಕಾರ್ಯಾಚರಣೆ, ಗ್ರಾಮದ ವಿವಿಧ ಮಂದಿರಗಳ ಉತ್ಸವ ಹಾಗೂ ಮಹತ್ವದ ಸಮಾರಂಭಗಳಲ್ಲಿ ಮಂದಿರಗಳ ಪರಿಸರ ಸ್ವಚ್ಛತೆ, ಅನ್ನಪ್ರಸಾದ ಬಡಿಸುವ ಸೇವೆ,

ಗ್ರಾಮದ ಕಲ್ಯಾಣಿ, ಕೆರೆ , ಸಾಮೂಹಿಕ ಸ್ಮಶಾನಭೂಮಿ ಸ್ವಚ್ಛತೆಯ ಸೇವೆಯನ್ನು ಮಾಡಿರುತ್ತಾರೆ.

ಸಂಪನ್ಮೂಲ ವ್ಯಕ್ತಿ:

ಸ್ವಾಸ್ಥ್ಯ ಸಂಕಲ್ಪ, ಮದ್ಯವರ್ಜನ ಶಿಬಿರ ಹಾಗೂ ವಿವಿಧ ಸಾಮೂಹಿಕ ಧಾರ್ಮಿಕ ಸಭಾ ಕಾರ್ಯಕ್ರಮಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸುತ್ತಿದ್ದಾರೆ. ಭಜನೆ ತಂಡವನ್ನು ಮಾಡಿಕೊಂಡು ಹಲವಾರು ಕಡೆಗಳಲ್ಲಿ ಭಜನಾ ಸೇವೆಯನ್ನು ಸಲ್ಲಿಸಿರುತ್ತಾರೆ.

ಗೌರವ ಪುರಸ್ಕಾರಗಳು:

ಇವರ ಸೇವೆಯನ್ನು ಗುರುತಿಸಿ ಅನೇಖ ಸಂಘ ಸಂಸ್ಥೆಗಳು ಗುರುತಿಸಿ ಸನ್ಮಾನಿಸಿವೆ. ವಸುಂಧರ ಸಾಮಾಜಿಕ ಸೇವಾಭಾವಿ ಸಂಸ್ಥೆ ಇಂಚಲಕರಂಜಿ ಇವರ ವತಿಯಿಂದ ಏಕತಾ ಗೌರವ ಪುರಸ್ಕಾರ , ಸಮಾಜ ಭೂಷಣ , ಸಮಾಜ ರತ್ನ ಪುರಸ್ಕಾರ. ಜನಕಲ್ಯಾಣ ಸಾಮಾಜಿಕ ಸೇವಾಭಾವಿ ಸಂಸ್ಥೆ ಕೊಲ್ಹಾಪುರ

ಇವರ ವತಿಯಿಂದ ಸ್ವಾತಂತ್ರ್ಯ ವೀರ ಸಾವರ್ಕರ್ ಆದರ್ಶ ಸಮಾಜ ಸೇವಕ ಪುರಸ್ಕಾರ. ರುಕ್ಮಿಣಿ ಚಾರಿಟೇಬಲ್ ಟ್ರಸ್ಟ್ ಠಾಣೆ ಮಹಾರಾಷ್ಟ್ರ - ಇವರ ವತಿಯಿಂದ ರಾಷ್ಟ್ರೀಯ ಸಮಾಜ ಪರಿವರ್ತಕ ಪುರಸ್ಕಾರ. ಕೈ.ಬಸವಂತ ನಾಗು ಸಿಂಗಾಡೆ ಚಾರಿಟೇಬಲ್ ಟ್ರಸ್ಟ್ ಬೇಡಕಿಹಾಳ ಇವರ ವತಿಯಿಂದ - ಆದರ್ಶ ಯುವ ಗೌರವ ಪುರಸ್ಕಾರ , ಆದರ್ಶ ಸಮಾಜ ಗೌರವ ಪುರಸ್ಕಾರ. ಗರುಡ ಝೇಪ ಅಕಾಡೆಮಿ ಕೊಲ್ಲಾಪುರ ಮಹಾರಾಷ್ಟ್ರ ಇವರ ವತಿಯಿಂದ ಇನ್ನೋವೆಟಿವ್ ಟೀಚರ್ಸ್ ಆಫ್ ಇಂಡಿಯಾ ನ್ಯಾಷನಲ್ ಅವಾರ್ಡ್ ಮುಂತಾದ ಗೌರವಕ್ಕೆ ಪಾತ್ರರಾಗಿದ್ದಾರೆ.

ಬಾಳಾಸಾಬ್ ಶಿಂದೆ ಇವರು ತಾವು ಸಮಾಜಕ್ಕೆ ಸೇವೆ ಸಲ್ಲಿಸುವ ಜೊತೆಗೆ ಇತರರನ್ನೂ ಸಮಾಜ ಕಳಕಳಿಯ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಲು ಪ್ರೋತ್ಸಾಹ ನೀಡುತ್ತಿದ್ದಾರೆ. ವಿಪತ್ತು ನಿರ್ವಣಾ ಇರಲಿ, ಸಮಾಜ ಸೇವೆಯೇ ಇರಲಿ ಇವರು ಸದಾ ಮುಂದಿರುತ್ತಾರೆ.

**ಜನಜಾಗೃತಿ ಪ್ರಾದೇಶಿಕ ವಿಭಾಗ**